**ಸಾಕ್ಷಿಯನ್ನು ದಿಃ 27.07.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯರ ಪರ ವಕೀಲರಾದ ಶ್ರೀ ಎಸ್ ಎಸ್ ಪಿ. ರವರಿಂದಃ**

1) ದಾವಾ ಸ್ವತ್ತಿನಲ್ಲಿ ಎರಡು ಪೋಶನ್ ಮನೆ ಇದೆ ಎಂದರೆ ಸರಿ. ಸಾಕ್ಷಿಗೆ ಒಂದು ಫೊಟೋವನ್ನು ತೋರಿಸಲಾಗಿ ಅದರಲ್ಲಿ ಎರಡು ಮನೆ ಇರುವುದನ್ನು ಗುರುತಿಸಿದ್ದು ಅದರಿ ಫೋಟೋವನ್ನು ನಿಡಿ-1 ಎಂದು ಗುರುತಿಸಲಾಯಿತು. ಈಗ ನಾವು ತೋಟದ ಮನೆಯಲ್ಲಿ ವಾಸವಿದ್ದೇವೆ ಎಂದರೆ ಸರಿಯಲ್ಲ. ನಿಡಿ-1 ರಲ್ಲಿರುವ ನೀಲಿ ಬಣ್ಣದ ಮನೆಯಲ್ಲಿ ರಂಗಶೆಟ್ಟರವರು ವಾಸವಿದ್ದಾರೆ ಎಂದರೆ ಸರಿಯಲ್ಲ. ನಿಡಿ-1 ರಲ್ಲಿರುವ ಬಿಳಿ ಬಣ್ಣದ ಮನೆಯಲ್ಲಿ ಪ್ರತಿವಾದಿಯರು ವಾಸವಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯ ವಿರುದ್ಧ ಸ್ವಾಧೀನಕ್ಕಾಗಿ ದಾವೆ ಸಲ್ಲಿಸಿಲ್ಲ.

2) ದಾವಾ ಸ್ವತ್ತು ನನಗೆ 40 ವರ್ಷಗಳ ಹಿಂದೆ ಸರ್ಕಾರದಿಂದ ಮಂಜೂರಾಗಿರುತ್ತದೆ. ಮಂಜೂರಾಗುವ ಕಾಲಕ್ಕೆ ನಾನು ಮತ್ತು ಪ್ರತಿವಾದಿಯರು ನಮ್ಮ ಕುಟುಂಬದ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡಿರಲಿಲ್ಲ. ದಾವಾ ಸ್ವತ್ತಿನ ಎರಡು ಮನೆಗಳ ವಿಸ್ತೀರ್ಣ ಪ್ರತ್ಯೇಕವಾಗಿ ಗೊತ್ತಿಲ್ಲ. ದಾವಾ ಸ್ವತ್ತಿನಲ್ಲಿ 17 x 30 ಅಡಿಗೆ ಸಂಬಂಧಿಸಿದಂತೆ 1ನೇ ಪ್ರತಿವಾದಿಗೆ ನಾನು ಹಕ್ಕು ಖುಲಾಸೆ ಪತ್ರ ಬರೆದುಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನನಗೆ ರುಜು ಹಾಕಲು ಬರುವುದಿಲ್ಲ. ಸಾಕ್ಷಿಗೆ ವಾದಪತ್ರವನ್ನು ತೋರಿಸಲಾಗಿ ಅದರಲ್ಲಿರುವ ಸಹಿ ನನ್ನದಲ್ಲ ಎಂದು ನುಡಿದಿರುತ್ತಾರೆ. ನಾನು 1ನೇ ಪ್ರತಿವಾದಿಗೆ ಹಕ್ಕು ಖುಲಾಸೆ ಪತ್ರ ಬರೆದುಕೊಟ್ಟಿದ್ದರೂ ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3) ನಿಡಿ-1 ರಲ್ಲಿ ನೀಲಿ ಬಣ್ಣದ ಮನೆಯು 1ನೇ ಪ್ರತಿವಾದಿಗೆ ಸೇರಿದ್ದು ಎಂದು ಪಂಚಾಯತಿ ದಾಖಲಾತಿ ಇದೆ ಎಂದರೆ ಸಾಕ್ಷಿ ಅದು ನನ್ನ ಹೆಸರಿನಲ್ಲಿದ್ದು ಪ್ರತಿವಾದಿ ಅವರ ಹೆಸರಿಗೆ ಮಾಡಿಕೊಂಡಿರಬಹುದು ಎನ್ನುತ್ತಾರೆ. ದಾವಾ ಸ್ವತ್ತಿನ ಒಂದು ಭಾಗದ ಸ್ವತ್ತನ್ನು 1ನೇ ಪ್ರತಿವಾದಿ

1990 ರಲ್ಲಿ ನಿರ್ಮಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮನೆಗೆ ವಿದ್ಯುತ್‌ಚಕ್ತಿಯು 1ನೇ ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ಗೊತ್ತಿಲ್ಲ. ದಾವಾ ಸ್ವತ್ತಿನ ಒಂದು ಭಾಗದ ಮನೆಯಲ್ಲಿ ಪ್ರತಿವಾದಿಯರೇ ಸ್ವಾಧೀನದಲ್ಲಿದ್ದರೂ ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ತಂಟೆ ತಕರಾರು ಯಾವಾಗ ಮಾಡಿರುತ್ತಾರೆ ಎಂದು ಗೊತ್ತಿಲ್ಲ. ಆದರೆ 10 ವರ್ಷಗಳ ಹಿಂದೆ ಮಾಡಿರುತ್ತಾರೆ. ಪ್ರತಿವಾದಿಯರು ಏನೆಂದು ತಂಟೆ ತಕರಾರು ಮಾಡಿದ್ದಾರೆ ಎಂದು ಗೊತ್ತಿಲ್ಲ. ನಾನು ಪೋಲೀಸ್ ಠಾಣೆಯಲ್ಲಿ ದೂರನ್ನು ನೀಡಲು ಪ್ರಯತ್ನಿಸಿರುತ್ತೇನೆ. ನಾನು ನಿಡಿ-1 ರಲ್ಲಿನ ಒಂದು ಮನೆಯಲ್ಲಿ ಸ್ವಾಧೀನದಲ್ಲಿದ್ದರೂ ಎರಡು ಮನೆಯಲ್ಲಿ ಸ್ವಾಧೀನದಲ್ಲಿದ್ದೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ವಾಸವಿರುವ ಮನೆಯನ್ನು ಹೊಡೆದುಕೊಳ್ಳಬೇಕು ಎಂಬ ಉದ್ದೇಶದಿಂದ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಎರಡು ಮನೆಗಳಿಗೆ ಪ್ರತ್ಯೇಕ ಚೆಕ್ಕುಬಂದಿ ತೋರಿಸಲು ತೊಂದರೆ ಇತ್ತ ಎಂದರೆ ಸಾಕ್ಷಿ ಎರಡು ಮನೆಗಳು ನನ್ನದೇ ಎನ್ನುತ್ತಾರೆ.

**ಮರು ವಿಚಾರಣೆ ಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**(ಕುಸುಮ ವಿ.)**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ, ಚನ್ನರಾಯಪಟ್ಟಣ.**